ಜಾಯಿಕಾಯಿಯ ಹೊರಮೈಗೆ ಅಂಟಿಕೊಂಡಿರುವ ಪತ್ರೆ ತುಂಬ ಎಚ್ಚರದಿಂದ ಒಣಗಿಸಬೇಕಾದ ವಸ್ತು. ಹೆಚ್ಚು ಉಷ್ಣತೆಯಲ್ಲಿ ಒಣಗಿಸಿದರೆ ಇದರ ಕೆಂಬಣ್ಣ ಹೋಗುತ್ತದೆ. ಒಣಗಿಸುವಾಗ ಧೂಳು, ಹೊಗೆ ಸೇರಿಕೊಂಡರೂ ಗುಣಮಟ್ಟ ಕೆಡುತ್ತದೆ.

ಹೀಗಾಗಿ ಪತ್ರೆ ಒಣಗಿಸಲೆಂದೇ ನಾವು ಸ್ಥಳೀಯ ವರ್ಕ್‌ಶಾಪಿನಲ್ಲಿ ಒಂದು ಸರಳ ಡ್ರೈಯರ್



ಬಾಗಿಲು ತೆರೆದಾಗ

## ನಾವೇ ಮಾಡಿಸಿಕೊಳ್ಳಬಹುದಾದ

# ಜಾಪತ್ರೆ ಡ್ರೈಯರ್

● ವೆಂಕಟ್ರಮಣ ಕೆದಿಲ

ಚಿತ್ರಗಳು : ಹರ್ಷ ಕೆದಿಲ

ಮಾಡಿಕೊಂಡೆವು. ಹದಿನೈದು ವರ್ಷದಿಂದ ಇದೇ ಡ್ರೈಯರ್ ಬಳಸುತ್ತಿದ್ದೇವೆ. "ಇಷ್ಟು ಒಳ್ಳೆ ಗುಣಮಟ್ಟದ ಪತ್ರೆ ಬೇರೆಡೆ ಸುಲಭವಾಗಿ ಸಿಗುವುದಿಲ್ಲ" ಎನ್ನುತ್ತಾರೆ ನಮ್ಮಲ್ಲಿಗೆ ಬರುವ ಖರೀದಿದಾರ.

ನಮ್ಮ ಡ್ರೈಯರಿನ ಅಳತೆ 2.5 x 1.5 x 2.5 ಅಡಿ. ಅರ್ಧ ಇಂಚಿನ ಕಬ್ಬಿಣದ ಆಂಗ್ಲರಿನ ಚೌಕಟ್ಟು. ಇದಕ್ಕೆ ಹೊರಗೆ ಅಸ್ಬೆಸ್ಟಾಸ್ ಮತ್ತು ಒಳಗೆ ಥರ್ಮೋಕೋಲ್ ಶೀಟ್ ಜೋಡಿಸಿದೆ. ಮೇಲಿನಿಂದ ಕೆಳಗೆ ವರೆಗೆ 2 x 1.5 ಅಡಿ ವಿಸ್ತೀರ್ಣದ ಐದು ಸರಿಗೆ ಬಲೆ ಹಾಕಿದ ಟ್ರೇ ಸೇರಿಸಿದ್ದೇವೆ. ತಳದಲ್ಲಿ ಎರಡು ನೂರು ವಾಟ್ಸ್ ಬಲ್ಬ್ ಉರಿಸುವ ವ್ಯವಸ್ಥೆಯಿದೆ.

ರಾತ್ರಿ ಮಲಗುವ ಹೊತ್ತಿಗೆ ಹಸಿ ಪತ್ರೆಯನ್ನು ಒಣಹಾಕಿದರೆ ಬೆಳಗ್ಗೆ ಏಳುವ ಹೊತ್ತಿಗೆ ಚೆನ್ನಾಗಿ ಒಣಗಿ ಸಿದ್ಧವಾಗುತ್ತದೆ. ಹೆಚ್ಚುಕಮ್ಮಿ ಹನ್ನೆರಡು ಗಂಟೆ ಸಾಕು.

ಪತ್ರೆ ಮಾತ್ರವಲ್ಲದೆ ಏಲಕ್ಕಿ, ಹಪ್ಪಳ, ಸೆಂಡಿಗೆ ಒಣಗಿಸಲೂ ಇದನ್ನು ಬಳಸಿಕೊಳ್ಳುತ್ತಿದ್ದೇವೆ. ಜಾಯಿಕಾಯಿ ಒಣಗಿಸಲು ಇದನ್ನು ಬಳಸುವುದಿಲ್ಲ. ನಮ್ಮಲ್ಲಿ ಇರುವ ಬೇರೆ ಡ್ರೈಯರಿನಲ್ಲಿ ಜಾಯಿಕಾಯಿ ಒಣಗಿಸುತ್ತಿದ್ದೇವೆ.

ಮೇಲಿನ ಎರಡು ಟ್ರೇಗಳಲ್ಲಿ ಕೆಳಗಿನವುಗಳಷ್ಟು ಒಣಗುವುದಿಲ್ಲ. ಒಂದೇ ರೀತಿ ಒಣಗಬೇಕಾದರೆ ನಡುವೆ ಒಮ್ಮೆ ಟ್ರೇಗಳನ್ನು ಬದಲಿಸಬೇಕು. ಡ್ರೈಯರಿನ ಮೇಲ್ಬದಿಯಲ್ಲಿ ಆವಿ ಮೇಲಕ್ಕೆ ಹೋಗಲು ಕೆಲವು ರಂಧ್ರಗಳನ್ನು ಕೊಟ್ಟಿದ್ದೇವೆ. ಆದರೆ ಇವು ಸಾಕಾಗಿಲ್ಲ ಅನಿಸುತ್ತದೆ. ಮಾತ್ರವಲ್ಲ, ಒಳ್ಳೆ ಮಳೆಗಾಲದಲ್ಲಿ ನೀರಿನ ಪಸೆ ಒಳಗೆ ಕೆಲವೆಡೆ ತುಂಬಿಕೊಂಡು ಒಣಗಲು ಹೆಚ್ಚು ಹೊತ್ತು ತೆಗೆದುಕೊಳ್ಳುತ್ತದೆ.

ಡ್ರೈಯರಿನ ಮೇಲ್ಭಾಗದಲ್ಲಿ ಹಂಚಿನ ಮನೆಯಲ್ಲಿರುವಂತೆ ಎರಡೂ ಬದಿಗೆ ವಾರೆಯಾಗಿ ಚಾವಣಿ ಮಾಡಿಕೊಂಡರೆ ಉತ್ತಮ. ಹಂಚಿನ ಮಾಡಿನಲ್ಲಿ ಮೇಲ್ಬದಿಯಲ್ಲಿ ನಾವು ಮೂಲೆ ಹಂಚು ಇಡುವಂತಹ ಜಾಗದಲ್ಲಿ ಸ್ವಲ್ಪ ಗ್ಯಾಪ್ ಕೊಟ್ಟರೆ ಇನ್ನೂ ಕಾರ್ಯಕ್ಷಮತೆ ಹೆಚ್ಚಬಹುದು ಅನಿಸುತ್ತದೆ.

ನಮ್ಮಲ್ಲಿ ಐವತ್ತು ಜಾಯಿಕಾಯಿ ಮರಗಳಿವೆ. ಸೀಸನಿನಲ್ಲಿ ಮೂರು ಟ್ರೇ ತುಂಬುವಷ್ಟು ಪತ್ರೆ ಸಿಗುತ್ತದೆ. ಒಟ್ಟು ಇನ್ನೂರೈವತ್ತು ಕಿಲೋ ಜಾಯಿಕಾಯಿ, ಐವತ್ತು ಕಿಲೋ ಪತ್ರೆ ಸಿಗುತ್ತದೆ. ಜಾಯಿಕಾಯಿಗೆ ಸರಾಸರಿ ಕಿಲೋಗೆ 380 ರಿಂದ 400 ರೂ, ಪತ್ರೆಗೆ 900 ರೂಪಾಯಿ ಸಿಗುತ್ತದೆ. ಪತ್ರೆ ಕೊಳ್ಳಲೆಂದೇ ಕೇರಳದಿಂದ ಏಜೆಂಟರು ಬರುತ್ತಾರೆ.

ಈ ಡ್ರೈಯರ್ ತಯಾರಿಸುವ ಕಾಲಕ್ಕೆ ನಮಗೆ ರೂ.2000 ಖರ್ಚು ಬಂದಿತ್ತು. ಇದನ್ನು ತಯಾರಿಸಿದ ವೆಲ್ಡಿಂಗ್ ಶಾಪ್ ಈಗ ಇಲ್ಲ. ಆದರೆ ಯಾವುದೇ ಊರಿನ ವರ್ಕ್‌ಶಾಪಿನಲ್ಲಿ ಮಾಡಿಸಿಕೊಳ್ಳಬಹುದು.

ಥರ್ಮೋಕೋಲ್ ಶೀಟಿಗಿಂತಲೂ ಹೆಚ್ಚು ಕಾಲ ಬಾಳಿಕೆ ಬರಬಹುದಾದ ಶೀಟ್ ಇದೆಯಂತೆ. ಹೀಗೊಬ್ಬರು ಸಲಹೆ ಕೊಟ್ಟಿದ್ದಾರೆ. ಈ ಶೀಟಿನ ಹೆಸರು ಮಾತ್ರ ನನಗೆ ಈಗ ಮರೆತುಹೋಗಿದೆ.

ವೆಂಕಟ್ರಮಣ ಕೆದಿಲ
91877 06319 (ಸಂಜೆ 6 – 8)

(ನಿರೂಪಣೆ : ಅಡಿಕೆ ಪತ್ರಿಕೆ)

(ಇಂಥ ರೈತೋಪಯೋಗಿ ಉಪಕರಣ ಶ್ರಮ ಉಳಿಸುವ ಸಾಧನಗಳ ಲೇಖನಗಳಿಗೆ ಆದ್ಯತೆಯಿದೆ – ಸಂ)



ಒಳನೋಟ



ತಳ ಅಂತರದಲ್ಲಿ ಬಲ್ಬ್‌ಗಳು